ಸದಸ್ಯರ ಹೆಸರು: ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸುವ ಸಚಿವರು: ಡಾ।।ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಬೆಂಗಳೂರು ಮೈಸೂರು ನಗರ ಪ್ರದೇಶಗಳಲ್ಲಿರುವಂತೆ ಒಂದು ಸುಸಜ್ಜಿತವಾದ ಹೃದಯ ರೋಗ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ನಿರ್ಮಾಣ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಇದ್ದಲ್ಲಿ ಯಾವ ವರ್ಷದಿಂದ ಕಾರ್ಯ ಪ್ರಾರಂಭ ಮಾಡಲಾಗುವುದು?

ಇ) ಈ ಆಸ್ಪತ್ರೆಗೆ ತಗಲುವ ಅಂದಾಜು ವೆಚ್ಚವೆಷ್ಟು? ಇದರ ನೀಲಿ ನಕ್ಷೆ ಸಿದ್ದವಾಗಿದೆಯೇ?

ಉತ್ತರ

ಅ) ಸರ್ಕಾರದ ಮುಂದೆ ಅಂತಹ ಪ್ರಸ್ತಾವನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಕನ್ನಡ ಭವನ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 236(449)

ಸದಸ್ಯರ ಹೆಸರು: ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ).

ಉತ್ತರಿಸುವ ಸಚಿವರು: ಶ್ರೀಮತಿ ರಾಣಿ ಸತೀಶ್(ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯವರು)

ಪ್ರಶ್ನೆ

ಅ) ಹುಬ್ಬಳ್ಳಿ, ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಒಂದು ಸುಸಜ್ಜಿತವಾದ ಕನ್ನಡ

ಭವನ ಕಟ್ಟುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಕನ್ನಡ ಭವನ ಕಟ್ಟಲಿಕ್ಕೆ ಆಯ್ಕೆ ಮಾಡಿದ ಸ್ಥಳ ಯಾವುದು?

ಇ) ಈ ಸೌಂದರ್ಯದ ಕನ್ನಡ ಭವನ ಕಟ್ಟಲಿಕ್ಕೆ ನೀಲಿ ನಕ್ಷೆ ಸಿದ್ಧವಾಗಿದೆಯೇ; ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಉತ್ತರ

ಅ) ಅ. ಇಲ್ಲ

ಆ. ಆದರೆ ಧಾರವಾಡ ನಗರದಲ್ಲಿ ಸಾಂಸ್ಕೃತಿಕ ಸಮುಚ್ಚಯ ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ಅ. ಕನ್ನಡ ಭವನಕ್ಕಾಗಿ ಯಾವುದೂ ಇಲ್ಲ.

ಆ. ಆದರೆ ಸಂಸ್ಕೃತಿ ಸಮುಚ್ಚಯ ಕಟ್ಟಡಕ್ಕೆ ಧಾರವಾಡ ನಗರದ ಮಧ್ಯವರ್ತಿ ಸ್ಥಳ: ಸಿಸಿನಂ.115-14-111-02 ಅನ್ನು ಆಯ್ಕೆ ಮಾಡಲಾಗಿದೆ.

ಇ) ಅ. ಇಲ್ಲ

ಆ. ಆದರೆ ಸಾಂಸ್ಕೃತಿಕ ಸಮುಚ್ಚಯ ನೀಲಿ ನಕ್ಷೆ ಸಿದ್ಧವಾಗಿದ್ದು ಒಪ್ಪಿಗೆಗೆ ಪರಿಶೀಲನೆಯಲ್ಲಿದೆ.

ಇ. ಸಾಂಸ್ಕೃತಿಕ ಸಮುಚ್ಚಯದ ಅಂದಾಜು ವೆಚ್ಚ ರೂ.30.98 ಲಕ್ಷಗಳು.

ರಾಜ್ಯದಲ್ಲಿ ಕುಷ್ಟರೋಗ ನಿರ್ಮೂಲನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 237(450)

ಸದಸ್ಯರ ಹೆಸರು: ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸುವ ಸಚಿವರು: ಡಾ॥ ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)